**ಯುವಜನರು ವಿಜ್ಞಾನದಲ್ಲಿ ಹೆಚ್ಚಿನ ಆಸಕ್ತಿ  ವಹಿಸಬೇಕು – ಶ್ರೀ ಕಪಿಲ್ ಸಿಬ್ಬಲ್**

**ಬೆಂಗಳೂರು :ಅಕ್ಟೋಬರ್ ೨೬, ೨೦೦೫**

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಾಗರ ಅಭಿವೃದ್ಧಿ ಖಾತೆಯ ರಾಜ್ಯ ಸಚಿವರಾದ ಶ್ರೀ ಕಪಿಲ್ ಸಿಬ್ಬಲ್ ಅವರು ವಿಶ್ವದಾದ್ಯಂತ,ಯುವಜನರು ವಿಜ್ಞಾನದ ವಿಷಯದಲ್ಲಿ   ಆಸಕ್ತಿ ಕಳೆದುಕೊಳ್ಳತ್ತಿದ್ದು ಇದರ ಪರಿಣಾಮವಾಗಿ ವಿಜ್ಞಾನಿಗಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ ಎಂದರು . ಸಚಿವರು ನಗರದಲ್ಲಿಂದು ಏರ್ಪಡಿಸಿದ್ದ "ಮುಂಬರುವ ದಶಕಗಳಿಗಾಗಿ  ವಿಜ್ಞಾನ ಹಾಗು ತಂತ್ರಜ್ಞಾನ ವಲಯದಲ್ಲಿ ಭಾರತದ ಸ್ಪರ್ಧಾತ್ಮಕತೆ ಹಾಗೂ ಸಿದ್ಧತೆ "  ಎಂಬ ವಿಷಯ ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಚಿವರು ಮಾತನಾಡುತ್ತ ವಿಜ್ಞಾನದಲ್ಲಿ ಹೆಚ್ಚಿನ ಆಸಕ್ತಿಯನ್ನುಂಟು ಮಾಡಲು ಕಲಿಸುವಿಕೆ  ಹಾಗೂ ಕಲಿಯುವಿಕೆ ಪ್ರಕ್ರಿಯೆಯನ್ನು ಹೆಚ್ಚು ಅಕರ್ಷಕ ಮಾಡುವುದಲ್ಲದೆ ಶಾಲಾ ಮಟ್ಟದಿಂದಲೇ ಪ್ರಸಕ್ತವಾಗಿರುವ ಶಿಕ್ಷಣ ಪದ್ಧತಿಯನ್ನು   ಪುನರ್ ರಚಿಸಬೇಕಾಗಿದೆ ಎಂದರು .  ಮಾಹಿತಿ ತಂತ್ರಜ್ಞಾನ ವಲಯದಲ್ಲಿ   ಹೆಚ್ಚಿನ ಪ್ರತಿಭೆ ಹಾಗೂ ಮೂಲಭೂತ ಸೌಕರ್ಯಗಳ ಲಭ್ಯತೆಯಿರುವ ಕಾರಣ ಭಾರತವು ವಿಶ್ವದ ಇತರೆ ರಾಷ್ಟ್ರಗಳೊಂದಿಗೆ ಸ್ಪರ್ಧೆ ನೀಡುವ ಸ್ಥಾನದಲ್ಲಿದೆ ಎಂದರು .

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ  ಕಾರ್ಯದರ್ಶಿಗಳಾದ ಪ್ರೊ: ವಿ ಎಸ್ ರಾಮಮೂರ್ತಿ  ಮಾತನಾಡುತ್ತ ಪ್ರಸಕ್ತವಾಗಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಪ್ರಮುಖ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಗಳು ಸಹ ತಮ್ಮ ಕಾರ್ಯತಂತ್ರಗಳನ್ನು ಬದಲಾಯಿಸಿಕೊಳ್ಳುತ್ತಿವೆ ಎಂದರು .

ಕಾರ್ಯಕ್ರಮದಲ್ಲಿ  ಪ್ರೊ: ಸಿ ಎನ್ ಆರ್ ರಾವ್, ಲೈನ್ಸ್  ಪೌಲಿಂಗ್ ಸಂಶೋಧನ ಪ್ರೊಫೆಸರ್, ಡಾ. ಕೆ ಕಸ್ತೂರಿ ರಂಗನ್, ರಾಜ್ಯ ಸಭಾ ಸದಸ್ಯರು ಅಲ್ಲದೆ ವಿಜ್ಞಾನ ಸಮುದಾಯದ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು .

******

ಅದ : ಪಚ :ಪಾ:ಆ:ಕ: ಬೆಂ:೧೬:೨೦

೨೬-೧೦-೨೦೦೫